ಹೆಕ್ಟೇರ್ ಪ್ರದೇಶಕ್ಕೆ ಇದರಿಂದ ಸೌಲಭ್ಯವನ್ನು ಕೊಡಬೇಕೆನ್ನುವ ಉದ್ದೇಶ ನಮ್ಮದಾಗಿದೆ. ಕಾವೇರಿ tribunal order, ನಮ್ಮ ಕಾನೂನು ಇಲಾಖೆ ಅಭಿಪ್ರಾಯ, ನಮ್ಮ ಬೋರ್ಡ್‌ನ resolution ಬಗ್ಗೆ ಕೂಡ ಮಾನ್ಯ ಸದಸ್ಯರಿಗೆ ಮಾಹಿತಿ ಇದೆ. ಕಾನೂನಿನ ತೊಂದರೆಯಾಗದಂತೆ, ಕಾನೂನಿನ ಚೌಕಟ್ಟಿನೊಳಗೆ ತಂದು, ಆ ಬರ ಪ್ರದೇಶಕ್ಕೆ ನೀರು ಕೊಡುವುದಕ್ಕೆ ಎಲ್ಲಾ ರೀತಿಯ ಕ್ರಮಗಳನ್ನು ಜರುಗಿಸುತ್ತೇವೆ.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಸ್.ಸುರೇಶ್‌ಕುಮಾರ್[ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು]:– ಮಾನ್ಯ ಅಧ್ಯಕ್ಷರೆ, ದಿನಾಂಕ:07.06.–2011ರ 2ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 40 ಪ್ರಶ್ನೆಗಳ ಪೈಕಿ 33 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:– ಮಂಡಿಸಲಾಯಿತು.

[ಅನುಬಂಧ–1]

[2] ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು

1. ವಿಷಯ: ಬೆಳಗಾವಿಯಲ್ಲಿ ನಿರ್ಮಿಸಲಾಗುತ್ತಿರುವ ಸುವರ್ಣ ಸೌಧ ಕಾಮಗಾರಿ ಬಗ್ಗೆ.

ಶ್ರೀ ಪಿ.ಎಂ.ನರೇಂದ್ರಸ್ವಾಮಿ [ಮಳವಳ್ಳಿ]:– ಮಾನ್ಯ ಅಧ್ಯಕ್ಷರೆ, ಇಂದಿನ 'ಪ್ರಜಾವಾಣಿ ದಿನಪತ್ರಿಕೆಯಲ್ಲಿ ಬಂದಿರತಕ್ಕ 'ವಿವಾದದ ಸುಳಿಯಲ್ಲಿ ಸುವರ್ಣ ಸೌಧ ಕಾಮಗಾರಿ' ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ. ವಿಶೇಷವಾಗಿ ಬೆಳಗಾವಿಯಲ್ಲಿ ನಿರ್ಮಾಣ ಆಗುತ್ತಿರುವ ಸುವರ್ಣ ಸೌಧ ಕಟ್ಟಡದ ಕಾಮಗಾರಿಗಳ ಅಂದಾಜು ಪಟ್ಟಿ 232 ಕೋಟಿ ರೂ.ಗಳಿಂದ 370 ಕೋಟಿ ರೂ.ಗಳಿಗೆ ತಲುಪಿರುವ ಬಗ್ಗೆ ಸಂಶಯವನ್ನು ವ್ಯಕ್ತಪಡಿಸಿರುವುದಲ್ಲದೆ ಸಂಬಂಧಪಟ್ಟ ಇಲಾಖೆ ಸಚಿವರ ಮೇಲೆ ಗುಮಾನಿಯನ್ನೂ ಸಹ ವರದಿಯಲ್ಲಿ ವ್ಯಕ್ತಪಡಿಸಲಾಗಿದೆ. ಅವರ ಸಂಬಂಧಿಕರು ಇದರಲ್ಲಿ ಪಾತ್ರ ವಹಿಸಿದ್ದಾರೆ ಎಂಬುದನ್ನೂ ಇದರಲ್ಲಿ ಗಮನಕ್ಕೆ ತರುತ್ತಾ, ಅಲ್ಲಿ AEE ಒಬ್ಬರು PWD norms ಪ್ರಕಾರ ಕಾಮಗಾರಿಯನ್ನು ನಿಗದಿಪಡಿಸುತ್ತಿದ್ದರೆ, Superintending Engineerರೊಬ್ಬರು ಈ ವಿಚಾರದಲ್ಲಿ ಆ ಕೆಳ ಅಧಿಕಾರಿ ಮೇಲೆ ಹಲ್ಲೆಯನ್ನು ನಡೆಸಿ, ಬೆದರಿಕೆಯನ್ನು ಒಡ್ಡಿರುವ ಬಗ್ಗೆ ಪತ್ರಿಕೆಯಲ್ಲಿ ವರದಿಯಾಗಿದೆ. ನಾನು

ತಮ್ಮ ಮುಖಾಂತರ ವಿಶೇಷವಾಗಿ ಕೇಳುವುದೇನೆಂದರೆ ಆ Superintending Engineer ಮೇಲೆ ಇಲಾಖೆ ಏನು ಕ್ರಮವನ್ನು ಕೈಗೊಂಡಿದೆ? ಈಗಾಗಲೇ ಇಲಾಖೆಯ ನೌಕರರು ಈ ಕುರಿತು ಬೆಳಗಾವಿಯ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಕೊಟ್ಟಿದ್ದಾರೆಂದು ಈ ವರದಿಯಲ್ಲಿದೆ. ಅದರ ಆಧಾರದ ಮೇಲೆ ಇಲಾಖೆ ಕೈಗೊಂಡ ಕ್ರಮವೇನು? 15 ದಿವಸಗಳ ಕಾಲ strike ಮಾಡಿದರೂ ಸಹಾ 'ಯಾವುದೇ ಕ್ರಮ ಕೈಗೊಳ್ಳವುದಿಲ್ಲ, ಯಾರನ್ನೂ transfer ಮಾಡುವುದಿಲ್ಲ' ಎಂದು ಬಹಿರಂಗ ಹೇಳಿಕೆಗಳನ್ನು ಕೊಟ್ಟಿದ್ದಾರೆಂದು ಇದರಲ್ಲಿ ದಾಖಲಾಗಿದೆ. ದಯಮಾಡಿ ಈ ಒಂದು ಆರೋಪವನ್ನು ತೀವ್ರವಾಗಿ ಪರಿಗಣಿಸಿ, ಸಂಬಂಧಪಟ್ಟಂತಹ ಅಧಿಕಾರಿ ಮೇಲೆ ಕಾನೂನಿನ ರೀತಿ ಕ್ರಮವನ್ನು ಜರುಗಿಸಿ, ತಕ್ಷಣ ಅವನನ್ನು ಸಸ್ಪೆಂಡ್ ಮಾಡಿ, ತನಿಖೆಗೆ ಆದೇಶಿಸಬೇಕೆಂದು ಸಂಬಂಧಪಟ್ಟ ಸಚಿವರಲ್ಲಿ ನಾನು ತಮ್ಮ ಮುಖಾಂತರ ಮನವಿಯನ್ನು ಮಾಡುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ನರೇಂದ್ರಸ್ವಾಮಿಯವರು ಶೂನ್ಯ ವೇಳೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಅವರು ಪತ್ರಿಕಾ ವರದಿಯೊಂದನ್ನು ಆಧಾರವಾಗಿಟ್ಟುಕೊಂಡು ಇದನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ಆದರೆ ಈ ಶೂನ್ಯ ವೇಳೆ ಪ್ರಸ್ತಾಪವನ್ನು ಕೊಡುವಾಗ, ಆ ವರದಿಯನ್ನು ಅದಕ್ಕೆ ಅವರು ಲಗತ್ತಿಸಿಲ್ಲ. ನಾನು ಆ ಮಾಹಿತಿಯನ್ನು ತರಿಸಿಕೊಂಡು ಅದನ್ನು ಪರಿಶೀಲಿಸಿ, ಏನು ಕ್ರಮ ತೆಗೆದುಕೊಳ್ಳುತ್ತೇವೆಂದು ಸನ್ಮಾನ್ಯ ಸದಸ್ಯರಿಗೆ ತಿಳಿಸುತ್ತೇವೆ.

2. ವಿಷಯ: ಹೊಸ ತಾಲ್ಲೂಕುಗಳ ರಚನೆ ಬಗ್ಗೆ.

ಶ್ರೀ ಸಿದ್ದು ಸವದಿ [ತೇರದಾಳ]:– ಮಾನ್ಯ ಅಧ್ಯಕ್ಷರೆ, ಈ ಹಿಂದೆ ನಮ್ಮ ಸರ್ಕಾರ ಈ ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚನೆ ಮಾಡಲಿಕ್ಕೆ ಪ್ರಯತ್ನ ಪಟ್ಟಿತ್ತು. ಆದರೆ ಜನಗಣತಿ ಬಂದಿದ್ದರಿಂದ, ಅದನ್ನು ತಾತ್ಪೂರ್ತಿಕವಾಗಿ ತಡೆಹಿಡಿಯಲಾಗಿತ್ತು. ಈಗ ಸೆನ್ಸಸ್ ಮುಗಿದು ಹೋಗಿದ್ದರಿಂದ ಹೊಸ ತಾಲ್ಲೂಕುಗಳ ರಚನೆಗೆ ಚಾಲನೆ ಕೊಡಬೇಕು. ಈಗಾಗಲೇ ಎಂ.ಪಿ.ಪ್ರಕಾಶ್ ಆಯೋಗ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಆಗಿದೆ. ಆಡಳಿತದ ಹಿತದೃಷ್ಟಿಯಿಂದ ಮತ್ತು ನಮ್ಮ ಕ್ಷೇತ್ರಗಳ ಅಭಿವೃದ್ಧಿ ದೃಷ್ಟಿಯಿಂದ ಹೊಸ ತಾಲ್ಲೂಕುಗಳ ರಚನೆ ಬಹಳಷ್ಟು ಅತ್ಯವಶ್ಯವಾಗಿರುವುದರಿಂದ ತಕ್ಷಣ ಹೊಸ ತಾಲ್ಲೂಕುಗಳ ರಚನೆಯನ್ನು ಸರ್ಕಾರ ಮಾಡಿ ಆದೇಶ ಮಾಡಬೇಕೆಂದು ತಮ್ಮ